**IN THE MEDIA**


# ಸಂಯುಕ್ತ ಕರ್ನಾಟಕ

Monday, August 17th , 2009




ಕೊನೆಗೂ ಸಿಕ್ಕ ಮಾಲೀಕರು... ಲೆಟ್ಸ್ ಲೈವ್ ಟುಗೆದರ್ ಸಂಸ್ಥೆ ಭಾನುವಾರ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಾಣಿ ಪ್ರಿಯರು ಬೀದಿ ನಾಯಿಗಳನ್ನು ದತ್ತು ತೆಗೆದುಕೊಂಡರು.

## ಹಿರಿಯ ನಾಗರಿಕರ ಗುರುತಿನ ಚೀಟಿಗೆ ಪತ್ರಕರ್ತರ ವೇದಿಕೆಯಲ್ಲಿ ಅರ್ಜಿ

**ಬೆಂಗಳೂರು, ಆ 16:** ಹಿರಿಯ ನಾಗರಿಕರು ಗುರುತಿನ ಚೀಟಿಗಾಗಿ ಹಿರಿಯ ಪತ್ರಕರ್ತರ ವೇದಿಕೆಯಲ್ಲಿ ಅರ್ಜಿ ಪಡೆಯಬಹುದು. ರಾಜ್ಯ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಇಲಾಖೆಯು ಹಿರಿಯ ನಾಗರಿಕರ ಗುರುತಿನ ಚೀಟಿಗೆ ಅರ್ಜಿ ಸಲ್ಲಿಸುವ ಸಂಸ್ಥೆಯಾಗಿ ಹಿರಿಯ ಪತ್ರಕರ್ತರ ವೇದಿಕೆಗೆ ಮಾನ್ಯತೆ ನೀಡಿದೆ. ಗುರುತಿನ ಚೀಟಿಗಾಗಿ ನಂ.261, 3ನೇ ಮುಖ್ಯರಸ್ತೆ, ಕೋರಮಂಗಲ, 8ನೇ ಬಡಾವಣೆ,ಬೆಂಗಳೂರು–95 ಸಂಪರ್ಕಿಸಲು ಪತ್ರಕರ್ತರ ವೇದಿಕೆ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂ. 080– 25715038, ಮೊ ಸಂ 9449708876.

**■ ಪ್ರತಿಭಾನ್ವಿತೆಗೆ ಪ್ರೋತ್ಸಾಹ**

ಕಡು ಬಡತನದ ನಡುವೆಯೂ ವಿದ್ಯಾರ್ಥಿನಿ ಶೃತಿ ಕಳೆದ ದ್ವಿತೀಯ ಪದವಿ ಪೂರ್ವ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಇಡೀ ರಾಜ್ಯಕ್ಕೆ ಅತಿ ಹೆಚ್ಚು ಅಂಕಗಳನ್ನು ಗಳಿಸಿರುವುದನ್ನು ಅಭಿನಂದಿಸಿ, ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ನ್ಯೂಯಾರ್ಕ್ ಕನ್ನಡ ಬಳಗವು 25 ಸಾವಿರ ರೂ. ಗಳನ್ನು ನೀಡಿ ಪ್ರೋತ್ಸಾಹಿಸಿದೆ ಎಂದು ಬಳಗದ ಗುರುಪ್ರಸಾದ್ ತಿಳಿಸಿದ್ದಾರೆ.

**■ ಸಿಂಧ್ಯ ಆಗ್ರಹ**

ರಾಜ್ಯದಲ್ಲಿ ಹಂದಿ ಜ್ವರ, ಡೆಂಗ್ಯೂ ಮತ್ತು ಚಿಕೂನ್‌ಗುನ್ಯಾ ಕಾಯಿಲೆಗಳು ಉಲ್ಬಣಗೊಳ್ಳುತ್ತಿದ್ದು, ಅನೇಕ ಸಾವು ನೋವುಗಳು ಸಂಭವಿಸಿವೆ. ಚರಂಡಿಗಳಲ್ಲಿ ನಿಂತಿರುವ ನೀರು, ಕಸದ ರಾಶಿ ಮತ್ತು ಮಲಿನವಾಗುತ್ತಿರುವ ಪರಿಸರ ಇದಕ್ಕೆ ಕಾರಣವಾಗಿದ್ದು ನಗರ ಪಾಲಿಕೆ ತಕ್ಷಣ ಕಾರ್ಯೋನ್ಮುಖಿ ಆಗಬೇಕು ಎಂದು ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯ ಒತ್ತಾಯಿಸಿದ್ದಾರೆ.